**CW : 7**

PW : 6

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.224/2019

ಸಾಕ್ಷಿದಾರರ ಹೆಸರು : ಬಷೀರ್

ತಂದೆಯ ಹೆಸರು : ಆಮು ಬ್ಯಾರಿ

ಪ್ರಾಯ : 56 ವರ್ಷ

ಉದ್ಯೋಗ ಕೃಷಿ

ವಾಸಸ್ಥಳ : ಪಾಣಾಜೆ ಗ್ರಾಮ

ದಿನಾಂಕ: **26.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಚಾಸಾ-1 ನನ್ನ ಅಣ್ಣ. ಸುಮಾರು ವರ್ಷಗಳಿಂದ ಪಾಣಾಜೆ ಗ್ರಾಮದ ಆರ್ಲಪದವು ಎಂಬಲ್ಲಿ ಚಾಸಾ-1 ಅಡಿಕೆ ಮತ್ತು ಕಾಳುಮೆಣಸು ವ್ಯವಹಾರ ಮಾಡುತ್ತಾರೆ. ಅಂಗಡಿಗೆ ದೂರದಿಂದ ಕಾಳುಮೆಣಸು ಮತ್ತು ಅಡಿಕೆಯನ್ನು ತರುತ್ತಿದ್ದರು. ಒಂದು ಬಾರಿ ಸಕಲೇಶಪುರದಿಂದ 930 ಕಿಲೋ ಕಾಳುಮೆಣಸು ತಂದು ಅಂಗಡಿಯಲ್ಲಿ ಇಟ್ಟಿದ್ದರು. ಇಟ್ಟಿದ್ದ ಕಾಳುಮೆಣಸನ್ನು ಅಂಗಡಿಯ ಶೆಟರ್ ಒಡೆದು ಕದ್ದಿದ್ದಾರೆ ಎಂದು ಚಾಸಾ-1 ತಿಳಿಸಿದರು. ಎಷ್ಟು ಮೌಲ್ಯದ ಕಾಳುಮೆಣಸು ಎಂದರೆ 3 ಲಕ್ಷ ಚಿಲ್ಲರೆ ಇರಬಹುದು ಎಂದು ನುಡಿಯುತ್ತಾರೆ. ಅದರ ಬಗ್ಗೆ ಚಾಸಾ-1 ದೂರು ಕೊಟ್ಟರು. ಕಾಳುಮೆಣಸನ್ನು ಚಾಸಾ-1 ರವರ ಅಂಗಡಿಯಿಂದ 8 ಜನ ಕದ್ದಿದ್ದರು ಎಂದು ಗೊತ್ತಾಯಿತು. ಅವರು ಕದ್ದಿದ್ದ ಕಾಳುಮೆಣಸಿನಲ್ಲಿ ಸ್ವಲ್ಪ ಭಾಗ ಸಿಕ್ಕಿತು ಎಂದು ಗೊತ್ತಾಯಿತು. ನನಗೆ ಅದರ ಬಗ್ಗೆ ಸರಿಯಾಗಿ ಗೊತ್ತಿಲ್ಲ. ಆ ವ್ಯಕ್ತಿಗಳು ಬೊಲೆರೋ ಮತ್ತು ಇನ್ನೋವಾ ಮತ್ತು ಇನ್ನು ದೊಡ್ಡ ಗಾಡಿ ಬಳಸಿ ಕದ್ದಿರಬಹುದು. ಕದ್ದವರನ್ನು ನೋಡಿದರೆ ಗುರುತಿಸಬಹುದಾ ಎಂದರೆ ಸಾಕ್ಷಿಯು ಅವರು ನನಗೆ ಪರಿಚಯ ಇಲ್ಲ ಎಂದು ನುಡಿಯುತ್ತಾರೆ.

ನಾನು ಕಳ್ಳತನವಾದ ಬೆಳಗ್ಗೆ ಅಂಗಡಿಗೆ ಹೋಗಿದ್ದೇನೆ. ಸಾಕ್ಷಿ ನಿಪಿ-6 ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಪೊಲೀಸರು ನನ್ನನ್ನು 2 ಬಾರಿ ವಿಚಾರಣೆ ಮಾಡಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ.ಯವರು ಸದ್ರಿ ಸಾಕ್ಷಿಯನ್ನು** ಭಾಗಶ: **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಕೋರಿದ್ದು, ವಾದವನ್ನು ಆಲಿಸಿ, ದಾಖಲೆಗಳನ್ನು**

**ಪರಿಶೀಲಿಸಿದ ನಂತರ ಸದ್ರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ಮಾನ್ಯ ಸ ಅ ಅ ರಿಂದಃ

ದಿ.24-9-2017 ರಾತ್ರಿ 11 ರಿಂದ 25-9-17ರ ಬೆ.7.30 ರ ಅವಧಿಯಲ್ಲಿ ಚಾಸಾ-1 ರವರಿಗೆ ಸೇರಿದ ಅಂಗಡಿಯಲ್ಲಿ ಕಾಳುಮೆಣಸು ಕಳ್ಳತನವಾಗಿತ್ತು ಎಂದರೆ ಸರಿ. ಚಾಸಾ-1 ರವರಿಗೆ ಕಳ್ಳತನವಾಗಿದ್ದ ಕಾಳುಮೆಣಸು ಪೈಕಿ 850 ಕೆಜಿಯಷ್ಟು ವಾಪಸ್ಸು ಸಿಕ್ಕಿದೆ ಎಂದರೆ ಸಿಕ್ಕಿರಬಹುದು. ಉಳಿದ 139 ಕೆ ಜಿ ಕಾಳುಮೆಣಸನ್ನು ಆರೋಪಿತರಾದ ಅಬ್ದುಲ್ ಸಮದ್ ಮತ್ತು ಸುದಿರ್ ರವರು ಮಾರಾಟ ಮಾಡಿ ಬಂದ ಹಣವನ್ನು ಖರ್ಚುಮಾಡಿಕೊಂಡಿದ್ದಾರೆಂದು ಗೊತ್ತಾಯಿತು ಎಂದರೆ ಸರಿಯಲ್ಲ.

6 ಜನ ಆರೋಪಿತರನ್ನು ದಿ.13.10.2017 ರಂದು ಹಾಗೂ ಇಬ್ಬರು ಆರೋಪಿತರನ್ನು 1.11.17 ರಂದು ಪೊಲೀಸರು ಠಾಣೆಯಲ್ಲಿ ತೋರಿಸಿದ್ದಾರೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿದ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. ಆರೋಪಿತರನ್ನು ಪೊಲೀಸರು ನನಗೆ ತೋರಿಸಿದ್ದರೂ ಕೂಡಾ ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ**2 , 7** ಮತ್ತು **8** ಆರೋಪಿತರ ಪರ ವಕೀಲರಿಂದಃ

ನಮ್ಮ ಕೃಷಿ ಉತ್ಪನ್ನಗಳನ್ನು ಚಾಸಾ-1 ರವರ ಅಂಗಡಿಗೆ ಮಾರಾಟ ಮಾಡುವುದು ಉಂಟು. ನಾನು ಮತ್ತು ಚಾಸಾ-1 ಅನ್ಯೋನ್ಯವಾಗಿದ್ದೇವೆ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಬೊಲೆರೋ, ಇನ್ನೋವಾ ಹಾಗೂ ದೊಡ್ಡ ಗಾಡಿಯ ವಿಚಾರ ಪೊಲೀಸರು ತಿಳಿಸಿದ ಮೇಲೆ ಗೊತ್ತಾಗಿದೆ. ಇದೇ ಮೊದಲ ಬಾರಿಗೆ ನನಗೆ ಮೇಲೆ ತಿಳಿಸಿದ ವಿಚಾರ ಗೊತ್ತಾಗಿದೆ ಎಂದರೆ ಸರಿಯಲ್ಲ. ಈ ಕೇಸಿಗೆ ಸಂಬಂಧಿಸಿದಂತೆ ನಾನು ಪೋ.ಠಾಣೆಗೆ ಹೋಗಿಲ್ಲ. ಪೊಲೀಸರು ನನ್ನ ಹೇಳಿಕೆ ಮತ್ತು ಮರುಹೇಳಿಕೆಯನ್ನು ನನ್ನ ಸಮಕ್ಷಮ ಟೈಪ್ ಮಾಡಿಲ್ಲ. ನಿಪಿ-6 ರಲ್ಲಿ ಕಾಣುವ ಅಂಗಡಿ ಚಾಸಾ-1 ರವರಿಗೆ ಸೇರಿತ್ತು ಎನ್ನುವ ಬಗ್ಗೆ ಯಾವುದೇ ಕುರುಹುಗಳು ಕಂಡುಬರಾವುದಿಲ್ಲ ಎಂದರೆ ಸರಿ. ನಿಪಿ-6 ರಲ್ಲಿ ಕಂಡುಬರುವ ಶೆಟರ್ ಹಾಗೂ ಗೋಡೆ ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲು ಕಂಡುಬರುತ್ತದೆ ಎಂದರೆ ಸರಿ. ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲದಿದ್ದರೂ ಕೂಡಾ ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿತರ ಪರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**CW : 7**

PW : 6

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.